# ನೀರ್ಗಲ್ಲ ಮೇಲೆ ಕಾಮ್ಯಾ ಶಾಸನ

■ ರಾಘು



ದಕ್ಷಿಣ ಧ್ರುವದ ನೀರ್ಗಲ್ಲ ಮೇಲೆ ಕೀರ್ತಿಯ ಶಾಸನ ಕೆತ್ತಿದ ಕಾಮ್ಯಾ ಕಾರ್ತಿಕೇಯನ್ ಉತ್ತರ ಧ್ರುವದಲ್ಲಿಯೂ ರಾಷ್ಟ್ರೀಯ ಧ್ವಜವನ್ನು ಹಾರಿಸುವ ಕನಸಿನಲ್ಲಿ ಇದ್ದಾರೆ. ಈಚೆಗೆ ದಕ್ಷಿಣ ಧ್ರುವದಲ್ಲಿ (South pole) ತ್ರಿವರ್ಣ ಬಾವುಟವನ್ನು ಹಾರಿಸಿ ಸುದ್ದಿಯಾಗಿದ್ದಾರೆ. ನೀರ್ಗಲ್ಲ ಮೇಲೆ ಗುರುತು ಮೂಡಿಸಿದ ಕಿರಿಯ ಭಾರತೀಯ ಯುವತಿ ಎಂಬ ಕೀರ್ತಿಗೂ ಭಾಜನರಾಗಿದ್ದಾರೆ. ಇದರ ಜೊತೆಗೆ ಅವರ ಆ ಕೀರ್ತಿಯ ಕಿರೀಟಕ್ಕೆ ಅತಿ ಕಿರಿಯ ಎರಡನೇ ಪರ್ವತಾರೋಹಿ ಮಹಿಳೆ ಎಂಬ ಅನನ್ಯ ಗರಿಯೂ ಮೂಡಿದೆ.

ಕಳೆದ ಡಿಸೆಂಬರ್ 27ರಂದು ಕಾಮ್ಯಾ ದಕ್ಷಿಣ ಧ್ರುವವನ್ನು ತಲುಪುವ ಮೂಲಕ ಅಂಟಾರ್ಟಿಕಾದ ಸರಿ ಸುಮಾರು 60 ನಾಟಿಕನ್ ಮೈಲು (115 ಕಿಲೋಮೀಟರ್) ದುರ್ಗಮ ಹಾದಿಯನ್ನು ಸವೆಸಿದ್ದರು. ಆ ಸಾಹಸಮಯ ಯಾನದ ಸಮಯದಲ್ಲಿ ಅಲ್ಲಿನ ತಾಪಮಾನ –30ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿತ್ತು. ಭೀಕರವಾಗಿ ಬೀಸುವ ಚಳಿಗಾಳಿಯನ್ನು ಲೆಕ್ಕಿಸಿಲ್ಲ. ಕ್ಷಣ ಕ್ಷಣಕ್ಕೂ ಎದುರಾಗುತ್ತಿದ್ದ ಪ್ರಾಕೃತಿಕ ವಿಕೋಪದ ಸವಾಲನ್ನು ಮೆಟ್ಟಿನಿಂತು ತಮ್ಮ ಕಾಲನ್ನು ಮುಂದಕ್ಕೆ ಜಾರಿಸುತ್ತಾ, ಆಸರೆಯ ಊರುಗೋಲಿನಲ್ಲಿ ಸಮತೋಲನ ಸಾಧಿಸುತ್ತಾ ಗುರಿಯನ್ನು ತಲುಪಿದ್ದಾರೆ. ಇದು ಅವರ ಸಾಹಸ ಮನೋಭಾವದ ಸಾಮರ್ಥ್ಯವನ್ನು ಸಾಬೀತುಪಡಿಸುತ್ತದೆ.



ಮುಂಬೈ ಮೂಲದ ಕಾಮ್ಯಾ ಅವರ ತಂದೆ ಕಾರ್ತಿಕೇಯನ್ ನೌಕಾಪಡೆಯ ಕಮಾಂಡರ್. ತಾಯಿ ಲಾವಣ್ಯ ಶಿಕ್ಷಕಿ. ಕಾಮ್ಯಾ ನೇವಿ ಚಿಲ್ಡ್ರನ್ ಶಾಲೆಯಲ್ಲಿ ಓದಿದ್ದರು. ಕಳೆದ ವರ್ಷ ಏಪ್ರಿಲ್ 27ರಂದು ಬೆಂಗಳೂರಿನಲ್ಲಿ ಟಿಸಿಎಸ್ ಸಂಸ್ಥೆ ಏರ್ಪಡಿಸಿದ್ದ ವರ್ಲ್ಡ್ 10 ಕಿ.ಮೀ. ಮ್ಯಾರಥಾನ್ ಸ್ಪರ್ಧೆಯಲ್ಲಿಯೂ ಭಾಗವಹಿಸಿದ್ದರು. ಅಷ್ಟು ದೂರದ ಓಟಕ್ಕೆ ಅದೇ ಮೊದಲ ಬಾರಿಗೆ ಸ್ಪರ್ಧಿಸಿದ್ದೆ ಎಂದು ಅವರು ಹೇಳಿಕೊಂಡಿದ್ದರು.

ಕಾಮ್ಯಾ ಸಾಹಸಯಾನಕ್ಕೆ ಇದೇನೂ ಹೊಸತಲ್ಲ. ಯುವ ಉತ್ಸಾಹಿ ಪರ್ವತಾರೋಹಿ ಕಾಮ್ಯಾ ಹದಿಹರೆಯದಲ್ಲಿಯೇ ಪರ್ವತಾರೋಹಿ ಕ್ಷೇತ್ರದಲ್ಲಿ ಜಗತ್ತಿನ ಗಮನ ಸೆಳೆದಿದ್ದಾರೆ. 2024ರ ಮೇ ತಿಂಗಳಲ್ಲಿ ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ್ದರು. ಆಗ ಅವರಿಗೆ 16 ವರ್ಷವಾಗಿತ್ತು. ಮುಂಬೈನ ಶಾಲೆಯಲ್ಲಿ ಓದುತ್ತಿರುವಾಗಲೇ ಮೌಂಟ್ ಎವರೆಸ್ಟ್ 8848 ಮೀಟರ್ ಎತ್ತರದಲ್ಲಿ ಕಾಲೂರುವ ಮೂಲಕ ವಿಶ್ವದ ಎರಡನೇ ಕಿರಿಯಳು ಎಂಬ ಖ್ಯಾತಿಗೆ ಪಾತ್ರವಾಗಿದ್ದರು. ಮೌಂಟ್ ಎವರೆಸ್ಟ್ ಪರ್ವತವನ್ನು ನೇಪಾಳದ ದಿಕ್ಕಿನಿಂದ ಏರಿದ ಭಾರತ ಮೂಲದ ಅತಿ ಕಿರಿಯ ಪರ್ವತಾರೋಹಿ ಈಕೆ.

ದಕ್ಷಿಣ ಅಮೆರಿಕದ ಅತಿ ಎತ್ತರದ ಮೌಂಟ್ ಅಕಾಂಕ್ವಾಗುವ ಶಿಖರವನ್ನು 2020ರಲ್ಲಿ ಏರಿದ ವಿಶ್ವದ ಅತ್ಯಂತ ಕಿರಿಯ ಹುಡುಗಿ ಎಂಬ ದಾಖಲೆಯನ್ನೂ ಬರೆದಿದ್ದರು. ವಿಶ್ವದ ಏಳು ಖಂಡಗಳ ಎತ್ತರದ ಶಿಖರಗಳನ್ನು ಏರುವ ಕನಸನ್ನು ಇವರು ಹೊತ್ತಿದ್ದಾರೆ. ತಂದೆಯ ಪ್ರೋತ್ಸಾಹ ಪರ್ವತಾರೋಹಣಕ್ಕೆ ಸ್ಫೂರ್ತಿ ಎಂದು ಕಾಮ್ಯಾ ಹೇಳುತ್ತಾರೆ. ಆಕೆಗೆ ತಂದೆಯೇ ಮೊದಲ ಗುರು ಕೂಡ. ದಕ್ಷಿಣ ಧ್ರುವ ಮುಟ್ಟಿರುವ ಅವರು ಉತ್ತರ ಧ್ರುವಕ್ಕೂ ತಮ್ಮ ಯಾನವನ್ನು ಮುಂದುವರಿಸುವ ಸಂಕಲ್ಪ ಹೊಂದಿದ್ದಾರೆ. ಅವರ ಸಾಹಸದ ಸಾಧನೆಗೆ ಭಾರತ ಸರ್ಕಾರ 2021ರಲ್ಲಿ ‘ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ’ ನೀಡಿ ಗೌರವಿಸಿತ್ತು. ಭಾರತೀಯ ನೌಕಾ ಪಡೆ ಕಾಮ್ಯಾ ಸಾಧನೆಯನ್ನು ‘ಎಕ್ಸ್’ನಲ್ಲಿ ಪ್ರಶಂಸಿಸಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65